(ಇಂದು ದಿನಾಂಕ 28.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ವಾಟೀ ಸವಾಲು:- 1, 2, 5ನೇ ಪ್ರತಿವಾದಿ ಪರ ಶ್ರೀ. ಎಸ್ ಕೆ ವಕೀಲರಿಂದ:-**

ಈ ದಾವೆಯನ್ನು ನಾನು ಸರ್ವೆ ನಂ. 186 ಕ್ಷೇತ್ರ 2 ಎಕರೆ ಆಸ್ತಿಗೆ ಸಂಬಂಧಿಸಿದಂತೆ ಪ್ರೇಮ್ ಕುಮಾರ್ , ಸುರೇಶ್ ಕಲಂಪಾಡ್, ಹರೀಂದರ್ ಸಿಂಗ್ , ಶಿವರಾಮ್ ರೆಡ್ಡಿ ರವರ ಮೇಲೆ ಹಾಕಿರುತ್ತೇನೆ. ದಾವಾ ಆಸ್ತಿಯ ಪೂರ್ವಕ್ಕೆ ಗೋಮಾಳ, ಪಶ್ಚಿಮಕ್ಕೆ ಸರ್ವೆ ನಂ. 185, ಉತ್ತರಕ್ಕೆ ಸರ್ವೆ ನಂ. 186, ದಕ್ಷಿಣಕ್ಕೆ ಸರ್ವೆ ನಂ. 187 ಇರುತ್ತದೆ. ಸರ್ವೆ ನಂ. 186 ರ ಒಟ್ಟು ವಿಸ್ತೀರ್ಣ 41 ಎಕರೆ ಇರುತ್ತದೆ. ಅದರ ಪೈಕಿ 24 ಎಕರೆ ಖರಾಬು ಉಳಿದ ಜಮೀನುಗಳು ಉಳುಮೆ ಮಾಡುವಂತಹ ಜಮೀನುಗಳು. ಸರ್ವೆ ನಂ. 186 ಮೂಲತಃ ಗೂನುಮುನಿಯಪ್ಪರವರಿಗೆ ಸೇರಿದ್ದು ಇರುತ್ತದೆ. ಗೂನುಮುನಿಯಪ್ಪರವರು 1951 ರಲ್ಲಿ 41 ಎಕರೆ ಆಸ್ತಿಯನ್ನು ನಂದಾಲ ಬೋವಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ. ಎಷ್ಟು ವಿಸ್ತೀರ್ಣ ಆಸ್ತಿಯನ್ನು ಗೂನು ಮುನಿಯಪ್ಪರವರು ನಂದಾಲ ಬೋವಿರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಗೂನು ಮುನಿಯಪ್ಪರವರು ನಂದಾಲಬೋವಿ ರವರಿಗೆ ಮಾಡಿಕೊಟ್ಟ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ಬಗ್ಗೆ ನಾನು ನಿಪಿ 1 ನ್ನು ಹಾಜರುಪಡಿಸಿದ್ದೇನೆ.

**(ಈ ಹಂತದಲ್ಲಿ ಸಾಕ್ಷಿಯು ಅನಾರೋಗ್ಯದಿಂದ ನಿಂತುಕೊಳ್ಳಲು ಆಗುವುದಿಲ್ಲ ಎಂದು ಕಾಲಾವಕಾಶ ಕೋರಿ ಮುಂದುವರಿದ ವಾಟೀ ಸವಾಲನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.